# ಪ್ರೊ. ಮಾಲತಿ ಪಟ್ಟಣಶೆಟ್ಟಿಯವರ ಕಥೆಗಳಲ್ಲಿ ವಿಷಮ ದಾಂಪತ್ಯ

**–ಪ್ರೊ. ಸೇವಂತಿ ಎಸ್. ಕಾಂಬಳೆ**
ಕೆ.ಎಸ್. ಜಿಗಳೂರು ಮಹಿಳಾ ಮಹಾವಿದ್ಯಾಲಯ, ಧಾರವಾಡ–03
ಮೊಬೈಲ್: 8310455166

ಉತ್ತರ ಕರ್ನಾಟಕದ ಹೆಗ್ಗರಿಮೆಯಾದ ಪ್ರೋ. ಮಾಲತಿ ಪಟ್ಟಣಶೆಟ್ಟಿಯವರು ಕವಿಯತ್ರಿಯೆಂದೇ ಪ್ರಸಿದ್ಧರಾಗಿದ್ದರೂ ಉತ್ಕಟ ಜೀವನ ಪ್ರೀತಿಯ ಸಂವೇದನಾಶೀಲತೆಯ ಹಾಗೂ ಸ್ತ್ರೀ ಸಂವೇದನೆ ಮೂಲಕ ಕತೆಗಾರ್ತಿಯೆಂದು ಸಾಹಿತ್ಯಾಸಕ್ತರ ಪ್ರೀತಿ ಆದರಕ್ಕೆ ಪಾತ್ರರಾಗಿದ್ದ ಪ್ರೋ. ಮಾಲತಿ ಪಟ್ಟಣಶೆಟ್ಟಿ ಅವರ ಒಟ್ಟು ಸಾಹಿತ್ಯದಲ್ಲಿ ಮಹಿಳೆಯರ ಜೀವನದ ಸಮಸ್ಯೆಗಳಿಗೆ ಕನ್ನಡಿ ಹಿಡಿದು ಎಚ್ಚರಿಸುವ ಪ್ರಾಮಾಣಿಕ ಹಾಗೂ ದಿಟ್ಟತನದ ಚಿಂತನೆಯಿದೆ. ಹೆಣ್ಣಿನ ಜೀವನದ ನೋವು ಅವರ ಕಥೆಗಳ ಜೀವ ಧ್ವನಿಯಾಗಿದೆ. ಮಹಿಳೆಯರ ಸಾಹಿತ್ಯದಲ್ಲಿ ಮಹಿಳೆಯರ ಸಂವೇದನೆ ಅನಿರ್ಭಂದಿತವಾಗಿ ಕೆಲಸ ಮಾಡಬೇಕು. ಮಹಿಳೆಯು ಮಹಿಳೆಯಾಗಿ ಆದರೆ ಎಲ್ಲರಿಗಾಗಿ ಸಾಹಿತ್ಯ ರಚನೆ ಮಾಡಬೇಕು. ಅಂತಹ ಸಾಹಿತ್ಯಕ್ಕೆ ವೈಶಿಷ್ಟ್ಯ ಬರುತ್ತದೆ ಎಂಬುದನ್ನು ಪ್ರೋ. ಮಾಲತಿ ಪಟ್ಟಣಶೆಟ್ಟಿಯವರ ಕಥೆಗಳಲ್ಲಿ ಕಾಣಬಹುದು.

ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ವೈಯಕ್ತಿಕವಾಗಿ ಶೋಷಣೆಗೊಳಗಾದ ಹೆಣ್ಣು ಇಂದು ಸ್ವತಂತ್ರವಾಗಿ ಅಭಿವ್ಯಕ್ತಿಸುತ್ತಿದ್ದಾಳೆ. ಕಾರಣ ಇಷ್ಟೇ ತುಳಿತಕ್ಕೊಳಗಾದವರು ನೋವನ್ನು ಸಹಿಸಿ ಸಹಿಸಿ ಕೊನೆಗೊಮ್ಮೆ ಸಹಿಸಲಾರದೆ ದಿಡೀರನೆ ಸಿಡಿದು ಅನಿವಾರ್ಯವಾಗಿ ಸಾಹಿತ್ಯವನ್ನು ಅಭಿವ್ಯಕ್ತಿಯನ್ನಾಗಿ ಮಾಡಿಕೊಂಡಾಗ ಅವರು ರಚಿಸುವ ಸಾಹಿತ್ಯ ಅರ್ಥಪೂರ್ಣವಾಗಿರುತ್ತದೆ.

ಮಾಲತಿಯವರು ನವ್ಯ ಸಾಹಿತ್ಯ ಸಂದರ್ಭದಲ್ಲಿ ಬಂದರೂ ಇವರು ನವ್ಯ ಹಾಗೂ ಬಂಡಾಯ ಎರಡನ್ನು ಮಿಶ್ರಿಸಿಕೊಂಡು ಪ್ರಸ್ತುತ ಸಮಾಜದಲ್ಲಿ ಹೆಣ್ಣು ಮಕ್ಕಳ ಶೋಷಣೆಯನ್ನು ಪ್ರಮುಖ ವಸ್ತುವನ್ನಾಗಿಟ್ಟುಕೊಂಡು ಬರೆಯ ತೊಡಗಿದ್ದಾರೆ. ಅದರಲ್ಲಿ ವಿಷಯದಾಂಪತ್ಯ ಕೂಡಾ ಒಂದಾಗಿದ್ದು ಕಥೆಗಳಲ್ಲಿ ವ್ಯಕ್ತವಾಗುವ ಇವರ ಒಟ್ಟು ಆಶಯವನ್ನು ಈ ರೀತಿ ನೋಡಬಹುದು.

ಸಾಮಾಜಿಕ ಹಾಗೂ ಭಾವನಾತ್ಮಕ ಭದ್ರತೆ ಒದಗಿಸುವ ಉತ್ತಮ ಉದ್ದೇಶದಿಂದ ಕೌಟುಂಬಿಕ ವ್ಯವಸ್ಥೆ ರೂಪಗೊಂಡಿದ್ದರೂ ಸಹ ಅಲ್ಲಿ ವ್ಯಕ್ತವಾಗುವ ಲಿಂಗ ತಾರತಮ್ಯ ಧೋರಣೆಯಿಂದಾಗಿ ಹೆಣ್ಣಿನ ಶೋಷಣೆ ನಡೆಯುವ ಬಹುಮುಖ್ಯ ತಾಣವಾಗಿ ಬಿಡುತ್ತದೆ. ವಿವಾಹ ವ್ಯವಸ್ಥೆಯು ಗಂಡು–ಹೆಣ್ಣಿನ ನಡುವೆ ಅಧಿಕಾರ ಸಂಬಂಧವನ್ನು ರೂಪಗೊಳ್ಳಲು ಕಾರಣವಾಗುತ್ತದೆ. ಕುಟುಂಬ ಹಾಗೂ ವಿವಾಹವನ್ನು ರೂಢಿಸುವ ನಿಯಮಗಳು ಅನೇಕ ಸಂದರ್ಭಗಳಲ್ಲಿ ಹೆಣ್ಣಿನ ಪಾಲಿಗೆ ದಮನಕಾರಿಯಾಗಿ ಪರಿಣಮಿಸುತ್ತವೆ. ಸಾಮಾಜಿಕ ವ್ಯವಸ್ಥೆಯನ್ನು ಪುರುಷಪರವಾಗಿ ರೂಪಿಸಿಕೊಳ್ಳುವ ಮೂಲಕ ಪುರುಷಪ್ರಧಾನ ವ್ಯವಸ್ಥೆಯು ಹೆಣ್ಣಿನ

ಬದುಕನ್ನು ಎಲ್ಲ ನೆಲೆಗಳಲ್ಲಿ ನಿಯಂತ್ರಿಸುತ್ತವೆ. ಎಷ್ಟೋ ಸಂದರ್ಭಗಳಲ್ಲಿ ಕೌಟುಂಬಿಕ ವ್ಯವಸ್ಥೆ ಹಾಗೂ ಆಳುವ ಪುರುಷ ಪ್ರಾಧಾನ್ಯವನ್ನು ಮೀರಿ ಹೊರಬರುವುದು ಹೆಣ್ಣಿಗೆ ಅಸಾಧ್ಯವಾಗುತ್ತದೆ. ಹೆಣ್ಣಿನ ಇಂತಹ ಲವಲವಿಕೆಯ ಹಂಬಲಗಳನ್ನು ಸಾಮಾಜಿಕ ಒತ್ತಡಗಳು ಅಳಿಸಿಹಾಕಿ ಬಿಡುತ್ತವೆ. ಆಕೆ ಒಬ್ಬಂಟಿಯಾಗಿ ನಿಂತು ಸಾಮಾಜಿಕ ಒತ್ತಡಗಳನ್ನು ಮೀರುವುದು ಅಸಾಧ್ಯವಾಗುತ್ತದೆ. ಇದು ನಮ್ಮ ಭಾರತೀಯ ಕುಟುಂಬ ವ್ಯವಸ್ಥೆ. ಆದರೆ ಇಲ್ಲಿರುವ ನಿಯಮಗಳೆಲ್ಲ ಸ್ತ್ರೀಗೆ ಮಾತ್ರ ಅನ್ವಯವಾದವು. ಪುರುಷ ಸ್ವತಂತ್ರವಾಗಿಯೇ ಉಳಿದು ಸ್ತ್ರೀಯನ್ನು ಮಾತ್ರ ಬಂಧಿಸಿದ್ದನ್ನು ಇಂದಿನ ಹಲವಾರು ಕುಟುಂಬ ವ್ಯವಸ್ಥೆಯಲ್ಲಿ ಕಾಣಬಹುದು.

ಕುಟುಂಬವು ಒಂದು ರಥವಿದ್ದಂತೆ. ಗಂಡ –ಹೆಂಡತಿಯರಿಬ್ಬರೂ ರಥದ ಚಕ್ರಗಳು. ಕುಟುಂಬದ ಹೊಣೆ ಇಬ್ಬರ ಮೇಲೂ ಬೀಳಬೇಕಾದದ್ದು, ಬದಲಿಗೆ ರಥ ಒಂದು ಕಡೆ ವಾಲಿದರೆ ಊನವಾಗುತ್ತದೆ. ಹಾಗೇಯ ಗಂಡ –ಹೆಂಡತಿಯರಿಬ್ಬರೂ ದಾಂಪತ್ಯದಲ್ಲಿ ಸಮಪಾಲನ್ನು ಹೊಂದಿರಬೇಕು ಇದಕ್ಕೆ ಪ್ರೀತಿ– ಪ್ರೇಮ,ತ್ಯಾಗ ಸಹನೆಗಳು ಇಬ್ಬರಲ್ಲೂ ಇದ್ದು ಒಬ್ಬರನ್ನೊಬ್ಬರು ಅರ್ಥೈಸಿಕೊಂಡರೆ, ಕೌಟುಂಬಿಕ ಸ್ತರದಲ್ಲಿ ವಾಸಿಸುವ ಗಂಡು ಹೆಣ್ಣಿನ ಸಂಬಂಧವು ಸುಮಧುರವಾಗಿದ್ದರೆ ಮಾತ್ರ ದಾಂಪತ್ಯ ಜೀವನ ಸುಖಮಯವಾಗಿರುತ್ತದೆ. ಇಲ್ಲದೇ ಹೋದಲ್ಲಿ ಗಂಡು–ಹೆಣ್ಣು ಬೇರೆ ಬೇರೆಯಾಗಿ ಉಳಿಯುವ ಹಾಗೂ ವಿಚ್ಛೇದನೆ ಮೊದಲಾದ ಅವಘಡಗಳು ಸಂಭವಿಸುತ್ತವೆ. ವಿವಾಹ ಬಂಧನದಲ್ಲಿ ಬಂಧಿಸಲ್ಪಟ್ಟ ಗಂಡು–ಹೆಣ್ಣಿನ ನಡುವಿನ ಸಮಸ್ಯೆಗಳು ಯಜಮಾನ್ಯತೆ, ಸಣ್ಣತನ ಮೊದಲಾದ ಗುಣಗಳನ್ನು ಚಿತ್ರಿಸುವಲ್ಲಿ ಪ್ರೊ. ಮಾಲತಿ ಪಟ್ಟಣಶೆಟ್ಟಿಯವರು ತೋರಿದ ಪ್ರತಿಭೆ ಅನನ್ಯವಾದುದು. ಸಂಪ್ರದಾಯವಾದಿಗಳು ಹಿಂದೂ ಸ್ತ್ರೀಗೆ ಸ್ವಾತಂತ್ರ್ಯ ಇಲ್ಲವೆಂದು, ಆಕೆಗೆ ಸದಾ ಪರದಾಸ್ಯವೇ ಗತಿಯೆಂದು ವರ್ಣಿಸಿದ್ದಾರೆ. ದೌರ್ಭಾಗ್ಯವೆಂಬಂತೆ ಮಗುವಾಗಿದ್ದಾಗ ತಂದೆಯ ಅಧೀನ, ವಿಧವೆಯಾದರೆ ಅಥವಾ ಗಂಡಿನಿಂದ ದೂರವಾಗಿ ಉಳಿದಿದ್ದ ಪ್ರಸಂಗದಲ್ಲಿ ಮಗನ ಅಧೀನ, ಅಂತೂ ಹೆಣ್ಣು ಒಂದಿಲ್ಲ ಒಂದು ರೀತಿಯಲ್ಲಿ ಬಂಧಿಸಲ್ಪಟ್ಟಿದ್ದಾಳೆ ಎಂಬ ಬಾವನೆ ಜನರಲ್ಲಿ ಉಳಿದುಕೊಂಡೆ ಬಂದಿದೆ. ಆದರೆ ಇಂದಿನ ಯುಗದಲ್ಲಿ ಹೆಣ್ಣು ಗಂಡಿನಷ್ಟೇ ಸ್ವತಂತ್ರವಾಗಿ ಯಾರ ಅಧೀನದಲ್ಲೂ ಉಳಿಯದೇ ಬದುಕಬಲ್ಲಳು ಎಂಬುದನ್ನು ಮಾಲತಿ ಪಟ್ಟಣಶೆಟ್ಟಿಯವರು ಬಹುತೇಕ ಕಥೆಗಳಲ್ಲಿ ವ್ಯಕ್ತಗೊಂಡಿದೆ.

'ಬದುಕಂಬ ಮೋಹ' ಈ ಹಿನ್ನೆಲೆಯಲ್ಲಿ ರಚಿತಗೊಂಡ ಕತೆಯಾಗಿದೆ. ಜೀವನದ ಸಂಘರ್ಷಗಳಿಂದ ಹತಾಶೆಗೊಂಡ ಮಹಿಳೆಗೆ ಜೀವನ ಕೇವಲ ಶೂನ್ಯ ಕಾಣಿಕೆ ನೀಡಿದೆ. ಬದುಕಿನ ತಿರುವಿನಲ್ಲಿ ಒಂದು ಜಿವ ಮತ್ತೊಂದು ಜೀವಕ್ಕೆ ಆಸರೆಯಾಗುವ ಸುಂದರ ಕಥೆ ಇದಾಗಿದೆ. ಈ ಕಥಾ ನಾಯಕಿ ಅನಾಸ್ಥೆ ಮಲತಾಯಿಯ ಕಿರುಕುಳ, ಬಡತನದ ಬವಣೆ ಇವೆಲ್ಲವುಗಳಿಂದ ಬೇಸತ್ತು ತಾನು ಪ್ರೀತಿಸಿದ ಸದಾನಂದನೊಡನೆ ಓಡಿ ಹೋಗಿ ಮದುವೆಯಾಗುತ್ತಾಳೆ. ಮದುವೆಯಾದ ಹೊಸದರಲ್ಲಿ "ಪ್ರೀತಿಯೆ ಹಾಸಿಗೆ, ಹೊದಿಕೆ, ಉಡುಗೆ, ತೊಡುಗೆಯಾಗಿತ್ತು. ಅದೊಂದು ಅವರ್ಣೀಯ ಸುಖದ ಬಾಳಾಗಿತ್ತು. ಆಗ ಆಕೆ ಸಂತಸದ ಮುಗಿಲಲ್ಲಿ ಮೋಡವಾಗಿ ಚಲಿಸುತ್ತಿದ್ದಳು. ಜಗತ್ತು ಸುಂದರವಾಗಿತ್ತು. ಒಬ್ಬರನ್ನು ಬಿಟ್ಟು ಇನ್ನೊಬ್ಬರು

ಇರಲು ಸಾಧ್ಯವಾಗದ ಆತುರದ ಕಾತುರದ ಜೋಕಾಲಿ ಜೀಕುತ್ತ ಬಾಳ ಮಾಧುರ್ಯವನ್ನು ಆಕೆ ಸವಿಯುತ್ತಿದ್ದಳು."[1] ಹೀಗೆ ಹಾಲು ಜೇನಿನಂತಿದ್ದ ಸಂಸಾರದಲ್ಲಿ ಕೆಲಕಾಲದ ನಂತರ ಬಿರುಕುಂಟಾಗತೊಡಗಿತು.

ಶ್ರೀಮಂತಿಕೆಯ ಅಮಲಿನಲ್ಲಿ ಸದಾನಂದ ಕೈಹಿಡಿದವಳನ್ನು ಮರೆತು ಬೇರೊಬ್ಬ ಹೆಂಗಸನ್ನು ಮನೆಗೆ ತರುತ್ತಾನೆ. ಗಂಡನ ಸ್ತ್ರೀಲಂಪಟತನ, ಸ್ವೇಚ್ಛಾಚಾರದಿಂದ ಬೇಸತ್ತ ಕಥಾನಾಯಕಿ "ಹೊಸ ಹೊಸ ರುಚಿ ಉಣ್ಣುವ ಇಂಥ ಕೆಳಮಟ್ಟದ ರುಚಿಗಾರ ನೀ ಅಂತ ತಿಳಿದಿದ್ರ ನನ್ನ ಮನೀ ಬಿಟ್ಟು ಬರತಿದ್ದಿಲ್ಲಾ!"[2] ಎಂಬ ಮಾತಿನಿಂದ ಗಂಡನ ಹೇಯಕೃತ್ಯವನ್ನು ವಿರೋಧಿಸುತ್ತಾಳೆ. "ಪ್ರೀತಿ ವಿಶ್ವಾಸಗಳನ್ನು ಮಾರಿಕೊಂಡ ಇಂಥ ಬೇಜವಾಬ್ದಾರಿ ಗಂಡನಲ್ಲಿ ತಾನು ಪ್ರಾರ್ಥಿಸಿಕೊಳ್ಳಬೇಕೆ...........ತನ್ನನ್ನು ಪ್ರೀತಿಸು ಎಂದು......? ಛೇ.......... ಅಂಥ ದಯನೀಯ ಸ್ಥಿತಿ ತನಗೆ ಬೇಡ .....ಧಿಕ್ಕರಿಸಿದ ಗಂಡನನ್ನು ಧಕ್ಕರಿಸು, ನಿನ್ನ ದಾರಿ ಸಾಗಿ ಮುನ್ನಡೆ.........."[3] ತನ್ನ ಮನದ ಮಾತಿನಂತೆ ಗಂಡನ ಮನೆಯನ್ನು ಬಿಟ್ಟು ಸ್ವತಂತ್ರ್ವಾಗಿ ಬದುಕುವ ನಿರ್ಧಾರ ಕೈಗೊಳ್ಳುತ್ತಾಳೆ. ತನ್ನ ಆರು ವರ್ಷದ ಮಗ ಅಭಿಷೇಕನೊಂದಿಗೆ ಮುಂಬೈಗೆ ಬರುತ್ತಾಳೆ. ವಿದ್ಯಾವಂತಳಾದ್ದರಿಂದ ಕಾಲೇಜುಗಳಲ್ಲಿ ಕಷ್ಟ ಪಟ್ಟು ದುಡಿದು ಮಗನಿಗೆ ಎಂಜಿನೀಯರನನ್ನಾಗಿ ಮಾಡುತ್ತಾಳೆ. ತಾಯಿಯ ಮಾತನ್ನು ಮೀರಿ ಶ್ರೀಮಂತ ಹುಡುಗಿಯನ್ನು ಅಭಿಷೇಕ ಮದುವೆಯಾಗುತ್ತಾನೆ. ಶ್ರೀಮಂತಿಕೆಯ ಅಮಲಿನಲ್ಲಿ ತೇಲಾಡುವ ಸೊಸೆಯ ಮುಂದೆ ಕಥಾ ನಾಯಕಿಗೆ ಯಾವ ಸ್ಥಾನ ಮಾನವು ದೊರಕುವುದಿಲ್ಲ. ಗಂಡನಿಂದ ದೂರವಾದ ಮೇಲೆ ತನ್ನೆಲ್ಲ ಕಷ್ಟಗಳನ್ನು ಬದಗಿಟ್ಟು ಹುಟ್ಟಿದ ಮಗನಿಗಾಗಿ ಪಡಬಾರದ ಕಷ್ಟ ಪಟ್ಟು ಮಗನ ಏಳ್ಗೆಯಲ್ಲಿ ತನ್ನ ಸುಖಕಾಣುವ ಹೃದಯ ವೈಶಾಲತೆ ಕ್ರಮೇಣ ಮಗ ಬೆಳೆದು ದೊಡ್ಡವನಾಗಿ ಮದುವೆಯಾದ ಮೇಲೆ ತಾಯಿಯನ್ನು ಮರೆತಾಗ ಕರಗಿ ಹೋಗುತ್ತದೆ. ಇಲ್ಲಿ ಕಥಾ ನಾಯಕಿ ಮತ್ತೊಮ್ಮೆ ತನ್ನೆಲ್ಲ ಸಂಬಂಧವನ್ನು ಕಳಚಿಕೊಂಡು ಸ್ವತಂತ್ರವಾಗಿ ಏಕಾಂಗಿಯಾಗಿ ಬದುಕುವ ನಿರ್ಧಾರ ಕೈಗೊಳ್ಳುತ್ತಾಳೆ. ಹತಾಶೆಯಿಂದ ಶೂನ್ಯಗೊಂಡ ಅವಳ ಬದುಕಿನಲ್ಲಿ ನಾಯಿ ಮರಿಯ ಆಗಮನ ಮತ್ತೆ ಜೀವನ ಪ್ರೀತಿ ತುಂಬುತ್ತದೆ.

'ಪರಿತ್ಯಕ್ತ' ಕಥೆಯು ಪ್ರಾರಂಭವಾಗುವುದೇ ರೈಲು ಗಾಡಿಯಲ್ಲಿ. ಇಲ್ಲಿ ರೈಲು ಪ್ರಯಾಣ ಬದುಕಿನ ಪ್ರಯಾಣದ ವ್ಯಂಜಕ ಸಂಕೇತವಾಗಿ ಮೂಡಿಬರುತ್ತದೆ. ಮನುಷ್ಯನ ಬುದ್ಧಿ ಹಾಗೂ ಭಾವನೆಗಳು ಈ ಕಥೆಯಲ್ಲಿ ಬೃಹತ್ ವಸ್ತುವಾಗಿ ರೂಪಗೊಂಡಿದೆ. ತನ್ನ ಸ್ವತಂತ್ರ ಅಸ್ತಿತ್ವದ ಬಗ್ಗೆ ಅಪಾರ ಕಾಳಜಿಯುಳ್ಳ ಕಥಾ ನಾಯಕಿ ಮಧು ಪರಿಸ್ಥಿತಿಯ ಒತ್ತಡವಿದ್ದರೂ ಕೂಡಾ ಶ್ರೀಮಂತಿಕೆಯ ಸವಿಯನ್ನು ಸವಿಯುವುದಕ್ಕೋಸ್ಕರ ಪ್ರೀತಿಸಿದ ವಿಶಾಲನನ್ನು ಬಿಟ್ಟು ಆತನಿಗೆ ಹೇಳದೆ ಶ್ರೀಮಂತನಾದ ಎಕ್ಸಿ ಕ್ಯೂಟಿವ್ಹ್ ಎಂಜನೀಯರ್ ಹುದ್ದೆಯಲ್ಲಿದ್ದ ಅರುಣನನ್ನು ಮದುವೆಯಾಗುತ್ತಾಳೆ. ಗಂಡನ ಮನೆಯಲ್ಲಿ ಹೆಣ್ಣಿಗೆ ಎಷ್ಟೇ ಸಂಪತ್ತಿದ್ದರೂ

೧ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೮೪.
೨ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೪೮.
೩ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೪೯.

ಗಂಡನ ಪ್ರೀತಿ – ವಿಶ್ವಾಸಗಳು ದೊರೆಯದಿದ್ದರೆ ಆ ಸಂಪತ್ತೆಲ್ಲ ಕಸಕ್ಕೆ ಸಮಾನ. ಮಧು ಆಸ್ತಿ, ಹಣ, ಒಡವೆ, ಬಟ್ಟೆ ಎಲ್ಲವನ್ನು ಹೊಂದಿದ್ದರು ಗಂಡನ ಪ್ರೀತಿ ಮಾತ್ರ ದೊರಕವುದಿಲ್ಲ. "ಮನೆಯ ನೂರಾರು ಅಲಂಕಾರ ವಸ್ತುಗಳ ಕಪಾಟಿನಲ್ಲಿ ನನ್ನನ್ನು ಒಂದು ಗೊಂಬೆಯಂತೆ ಇಟ್ಟು ತಿಂಗಳುಗಟ್ಟಲೇ ಎಲ್ಲೆಲ್ಲಿಯೋ ತಿರುಗುತ್ತಿದ್ದ. ಹತ್ತಿರ ಇದ್ದಷ್ಟು ಸಮಯವೂ ರಾಕ್ಷಸನಂತಿರುತ್ತಿದ್ದ. ಕೋಪ, ತಾಪ, ತನ್ನ ಬಡತನದ ಅಪಮಾನಗಳು, ಜಗಳ, ಹೊಡೆತಗಳ ನಂತರ ವಾರಗಟ್ಟಲೇ ಕಾಣದಾಗುವುದು ಇದೆಲ್ಲ ಅವನ ಶ್ರೀಮಂತಿಕೆಗೆ ಆಸೆಪಟ್ಟು ಪಡೆದ ಫಲಗಳು"[4] ಎಂಬ ಮಾತಿನಲ್ಲಿ ವಿವಾಹದ ನಂತರ ಕಥಾನಾಯಕಿ ತನಗೆ ಕೌಟುಂಬಿಕ ನೆಲೆಯಿಲ್ಲ ಎಂಬ ತಳಮಳದಲ್ಲಿ ಸೋತದ್ದನ್ನು ಕಾಣುತ್ತೇವೆ. ಇಲ್ಲೆಲ್ಲ ಆಕೆಯ ವಿಷಮ ದಾಂಪತ್ಯದ ಹೊಯ್ದಾಟಗಳೇ ಮುಖ್ಯವಾಗುತ್ತವೆ. ಮದುವೆಯಾಗಿ ನಾಲ್ಕು ವರ್ಷಗಳ ನಂತರ ಬಾಳ ಹಾದಿಯಲ್ಲಿ ಮತ್ತೊಮ್ಮೆ ವಿಶಾಲನ ಭೇಟಿಯಾಗುತ್ತದೆ. ಆ ಬಾರಿ ಭೇಟಿಯಾದಾಗ ವಿಶಾಲ ಮತ್ತೊಂದು ಬಾರಿ ತಮ್ಮಿಬ್ಬರ ಪ್ರೀತಿಗೆ ಅವಕಾಶ ಕೊಟ್ಟಾಗಲೂ ಮಧು ಯಾವುದೇ ರೀತಿ ಪ್ರತಿಸ್ಪಂಧಿಸುವುದಿಲ್ಲಾ. ಗಂಡನಿಂದ ಬೇಸತ್ತ ಮಧು ಆತನಿಂದ ವಿಚ್ಛೇದನ ಪಡೆದು ಮೂರನೆಯ ವರ್ಷ ವಿಶಾಲನಲ್ಲಿ ಮತ್ತೆ ಪ್ರೀತಿಯನ್ನು ಅರಸಿ ಬೆಂಗಳೂರಿಗೆ ವ್ಯಾಲ್ಯುವೇಷನ್‌ಗಾಗಿ ಬರುತ್ತಾಳೆ. ವಿಶಾಲನಲ್ಲಿ ತನ್ನ ಪ್ರೀತಿಯನ್ನು ತನ್ನ ತಪ್ಪಿನ ಅರಿವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿ ವಿಫಲಳಾಗುತ್ತಾಳೆ. ಹೀಗೆ ಕಥೆಯಲ್ಲಿ ಕಥಾನಾಯಕಿಯ ಮನಸ್ಸಿನ ಹೊಯ್ದಾಟಗಳನ್ನು ಕಾಣಬಹುದು. ಗಂಡ –ಹೆಂಡತಿಯ ಮಧ್ಯ ಏರು ಪೇರುಗಳಾದಾಗ ಮಹಿಳೆ ಆತನಿಂದ ವಿವಾಹ ವಿಚ್ಛೇದನ ಪಡೆದು ತನ್ನಿಷ್ಟದಿಂದ ಇರಬಹುದಾದರು. ಸಮಾಜದ ಮಧ್ಯ ಬದುಕುವುದು ದುಸ್ತರವೇ ಆಗಿರುತ್ತದೆ.

ವಿದ್ಯಾವಂಥ ಹಾಗೂ ಎಷ್ಟೇ ಪ್ರತಿಭಾವಂತ ಸ್ತ್ರೀಯಾಗಿದ್ದರೂ ಗಂಡನಿಂದ ಶೋಷಣೆಗೆ ಒಳಗಾದ ಮಹಿಳೆಯ ಚಿತ್ರ 'ಮುಕ್ತಾ'ಕತೆಯಲ್ಲಿದೆ. ತನ್ನ ಜೀವನದಲ್ಲಿ ನೂರಾರು ಆಶೆ–ಆಕಾಂಕ್ಷೆಗಳನ್ನು ಹೊಂದಿದ ಸ್ತ್ರೀ, ವಾಸ್ತವದಲ್ಲಿ ಹಾಗಾಗದೇ ಕೊರಗುತ್ತಾಳೆ. ಕಥಾನಾಯಕಿಯ ಮುಕ್ತಾ ಒಬ್ಬ ಕಲಾವಿದೆ ಅವಳ ದುರಂತ ಜೀವನದಕಥೆ ಇದಾಗಿದೆ. ಮುಕ್ತಾ ಡಾ. ವಿಶ್ವನಾಥ ಎಂಬ ವೈದ್ಯನನ್ನು ಪ್ರೀತಿಸುತ್ತಾಳೆ. ಪ್ರೀತಿಯಲ್ಲಿ ಯಶಸ್ಸು ಕಾಣದೇ ಹಿರಿಯರ ಒತ್ತಾಯದಿಂದ ಶಂಕರರಾವ್ ಮಹಾಡಕರ ಎಂಬ ಒಬ್ಬ ರಾಜಕಾರಣಿಯನ್ನು ಮದುವೆಯಾಗುತ್ತಾಳೆ. ಸಂಗೀತದ ಬಗ್ಗೆ ಅಪಾರ ಆಸಕ್ತಿಯುಳ್ಳ ಮುಕ್ತಾಳಿಗೆ ಶಂಕರರಾವ್ "ಅದೇನೋ ಕೆಳದರ್ಜೆಯ ಕಲಾ ಅಂದಾ"[5] ಗಲೂ ಕೂಡಾ ಸಂಗೀತಾಧ್ಯಯನ ಬಿಡುವುದಿಲ್ಲಾ. ಕತೆಯ ಬಗೆಗೆ ಆಸಕ್ತಿಯಿರದ ಶಂಕರರಾವ್ ವಿರೋಧ ವ್ಯಕ್ತಪಡಿಸಿದಾಗಲೂ ಮುಕ್ತಾ ಗ್ವಾಲ್ಹೇಯರಕ್ಕೆ ಹೋಗಿ ಅಲ್ಲಿ ಮೂರು ತಿಂಗಳು ಇದ್ದು ಸಂಗೀತಾಭ್ಯಾಸ ಮಾಡುತ್ತಾಳೆ. ಇದರಿಂದ ಶಂಕರರಾವ್ ಮುಕ್ತಾಳ ಚಾರಿತ್ರ್ಯದ ಮೇಲೆ ಸಂಶಯ ಪಡುತ್ತಾನೆ. ಮಗ ಆನಂದನನ್ನು ತನ್ನ ಮಗನಲ್ಲಾ ಎಂದು ನಿರಾಕರಿಸುತ್ತಾನೆ. ಆಗ ಮುಕ್ತಾ ರಕ್ತ ತಪಾಸಣೆ ಮಾಡಿಸಿ ಮೆಡಿಕಲ್ ರೀಪೋರ್ಟ್‌ನ್ನು ಅವನ ಮುಂದೆ ತಂದು ತೋರಿಸುವ ಮೂಲಕ ಆನಂದ

೪ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೩೬.

೫ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೧೨೭.

ತಮ್ಮಿಬ್ಬರ ಮಗ ಎಂದು ಸಾಬೀತು ಪಡಿಸುತ್ತಾಳೆ. ಶಂಕರರಾವ್ ಮಗ ಆನಂದ ಕೂಡ ಸಂಗೀತ ವಿರೋಧಿಯಾಗಿದ್ದು ತಾಯಿಯನ್ನು ಪ್ರೀತಿಯಿಂದ ಕಾಣುವುದಿಲ್ಲ. ಶಂಕರರಾವ್ ಮುಕ್ತಾಳ ಕುರಿತು ಮಗನಲ್ಲಿ ಕೆಟ್ಟ ವಿಚಾರಗಳನ್ನು ತುಂಬಿರುವುದೇ ಇದಕ್ಕೆ ಕಾರಣ. ಮುಕ್ತಾ ದಾಂಪತ್ಯ ಜೀವನದಿಂದ ಬೇಸತ್ತು, ಬದುಕಿನಲ್ಲಿ ಯಾರ ಪ್ರೀತಿಯು ಕಾಣದೇ ಇದ್ದಾಗ ದೂರದ ಗ್ವಾಲ್ಹೇಯರಕ್ಕೆ ಹೋಗಿ ಸಂಗೀತಾಧ್ಯಯನದ ಜೊತೆಗೆ ಒಬ್ಬಂಟಿಯಾಗಿ ಬದುಕುವ ನಿರ್ಧಾರ ಕೈಗೊಳ್ಳುತ್ತಾಳೆ. ವಿಧಿ ಬರಹವೆಂಬಂತೆ ಅಪಘಾತವೊಂದರಲ್ಲಿ ಕಾಲು ಕಳೆದುಕೊಂಡು ಆಸ್ಪತ್ರೆಯಲ್ಲಿದ್ದಾಗ ಡಾ. ವಿಶ್ವನಾಥ ಕಳುಹಿಸಿದ ತಾರ ನೋಡಿ ಶಂಕರರಾವ್ ಆಸ್ಪತ್ರೆಗೆ ಬಂದರೂ ಕೂಡಾ ಮುಕ್ತಾಳನ್ನು ಭೇಟಿಯಾಗುವುದಿಲ್ಲ. "ನೋಡ್ರಿ ಅವರಿಗೆ ತಮ್ಮ ಗಾಣೆದ ಮುಂದ, ಜಗತ್ತಿನ ಯಾವುದೇ ವ್ಯಕ್ತಿಗೆ ಕಿಮ್ಮತ್ತ ಇಲ್ಲಾ......... ನಮಗೆ ಮತ್ತ ಅವರಿಗೆ ಅಷ್ಟೇನು ಸರಿ ಇಲ್ಲಾ ......... ಹೆಚ್ಚೇನು ಹೇಳೋದಿಲ್ಲಾ ನಾ ಬರತೀನಿ"[6] ಎಂದು ಹೇಳಿ ಹತ್ತು ಸಾವಿರ ರೂಪಾಯಿ ಚೆಕ್ ಇಟ್ಟು ಹೋಗುತ್ತಾನೆ. ಹೆಂಡತಿಯಾದವಳು ಕಾಲು ಕಳೆದುಕೊಂಡು ಯಾರ ಆಸರೆಯು ಇಲ್ಲದೆ ಅನಾಥಳಂತೆ ಆಸ್ಪತ್ರೆಯಲ್ಲಿರುವಾಗಲೂ ಗಂಡನಾದವನಿಗೆ ಹೆಂಡತಿಯ ಬಗ್ಗೆ ಸ್ವಲ್ಪವೂ ಮರುಕುವುಂಟಾಗುವುದಿಲ್ಲಾ ಅವನಿಗೆ ಅಧಿಕಾರ, ಹಣ, ಪ್ರತಿಷ್ಠೆಯ ಮುಖ್ಯವೆನಿಸುತ್ತವೆ. ರಾಜಕಾರಣಿಯನ್ನು ಹಿರಿಯರ ಜುಲುಮಿಯಿಂದ ಮದುವೆಯಾದ ಪ್ರತಿಭಾವಂತಳಾದ ಒಬ್ಬ ಕಲಾವಿದೆಯ ದಾರುಣ ಚಿತ್ರಣವೂ ನಮ್ಮನ್ನು ಬೆರಗುಗೊಳಿಸದೇ ಇರಲಾರದು. ಪುರುಷಾವಲಂಬನೆಯನ್ನು ಕಡೆಗಣಿಸುವುದರ ಮೂಲಕ ತನ್ನ ಮುಂದಿನ ಸ್ವಂತ ಬದುಕನ್ನು ರೂಪಿಸಲು ಮುಂದಾಗುವ ಮುಕ್ತಾ ಈ ರೀತಿಯಾದ ನಿರ್ಧಾರ ತಳೆಯುವುದೂ ಪುರುಷ ಪ್ರದಾನ ಸಮಾಜದ ಚಿಂತನೆಗಳಿಗೆ ತೋರುವ ಪ್ರತಿರೋಧವಾಗಿದೆ. ಪುರುಷಾಧಿಕಾರದ ಜೋತೆಗೆ ರಾಜಕೀಯ ಪದವಿಯೂ ಸೇರಿಕೊಂಡು ಅಧಿಕಾರದ ಪರಮಾವಧಿಯನ್ನು ಹೆಣ್ಣಿನ ಮೇಲೆ ಚಲಾಯಿಸುವ ಶಂಕರರಾವ್‌ನಲ್ಲಿ ಪುರುಷ ಯಜಮಾನ್ಯದ ಅತಿಯಿದೆ. ಪದವಿ, ಕೀರ್ತಿಗಳೇ ಮುಖ್ಯವಾಗುವ ಪುರುಷ ಪರಿಸ್ಥಿತಿಯ ನಿರೂಪಣೆ ಇಲ್ಲಿದೆ.

ಒಟ್ಟಿನಲ್ಲಿ ವೈವಾಹಿಕ ನೆಲೆಯಲ್ಲಿ ಹೆಣ್ಣು ಅನೇಕ ಕ್ಷುಲ್ಲಕ ಕಾರಣಗಳಿಗಾಗಿ ಪರಿತ್ಯಕ್ತಗೊಂಡು ಅಸಹನೀಯ ಬದುಕನ್ನು ಎದುರಿಸಬೇಕಾಗುತ್ತದೆ. ಪಿತೃ ಪ್ರಧಾನ್ಯತೆಯ ಮೌಲ್ಯಗಳು ಹೆಣ್ಣಿನ ಇಂತಹ ಸ್ಥಿತಿಗೆ ಪೂರಕವಾಗುತ್ತದೆ. ಗಂಡ ಹೆಂಡಿರ ಸಂಬಂಧವು ಅನೋನ್ಯವಾಗಿರಬೇಕು ಅಂದಾಗ ಮಾತ್ರ ಎಲ್ಲಾ ಕಾರ್ಯಗಳು ಸುಗಮವಾಗಿ ಸಾಗುತ್ತದೆ. ಇಲ್ಲದೇ ಹೋದಲ್ಲಿ ಪ್ರತಿದಿನ ಕಲಹದಲ್ಲಿಯೇ ಕಾಲಕಳೆಯಬೇಕಾಗುತ್ತದೆ. ಈ ಕಲಹದಿಂದ ಮನೆಯ ವಾತಾವರಣವೂ ಕಲುಷಿತಗೋಂಡು ಗಂಡು ಹೆಣ್ಣಿನ ಸಂಬಂಧವು ಹದೆಗೆಟ್ಟು ವಿಚ್ಛೇದನ ಇಲ್ಲವೆ ಪರಸ್ಪರ ದೂರವಾಗಿ ಉಳಿಯುವ ಸಾಧ್ಯತೆಗಳಿವೆ. ಇಂತಹ ಕುಟುಂಬಗಳಲ್ಲಿರುವ ಮಕ್ಕಳು ತಂದೆ– ತಾಯಿಯ ಪ್ರೀತಿ ವಾತ್ಸಲ್ಯ ಹಾಗೂ ಆರೈಕೆಗಳಿಂದ ದೂರವಾಗಿ ಮಾನಸಿಕವಾಗಿ ಬಳಲುವಂತಾಗುತ್ತದೆ ಎಂಬುದನ್ನು ಪ್ರೊ. ಮಾಲತಿ ಪಟ್ಟಣಶೆಟ್ಟಿಯವರು "ನಾಯಾಕ

೬ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೧೨೪.

ಹುಟ್ಟಿದೆನೋ....?" ಕಥೆಯಲ್ಲಿ ಧ್ವನಿತಗೊಂಡಿದೆ. ಆರು ವರ್ಷದ ಮಗು ರಚನಾಳ ತಂದೆ–ತಾಯಿಗಳಾದ ಆಶಾ ಮತ್ತು ಆನಂದ ಪ್ರತಿದಿನವೂ ಜಗಳವಾಡುತ್ತಲೇ ಇರುತ್ತಾರೆ. ಗಂಡಸು ತನ್ನ ಬಗೆಗೆ ತೋರಿಸುವ ಅನಾದರ, ಅನಾಸ್ಥೆ ಇವೆ ಮೊದಲಾದ ಮನೋಭಾವನೆಗಳು ಕಥಾನಾಯಕಿ ಆಶಾಳ ಸೂಕ್ಷ್ಮ ಪ್ರಕೃತಿಯ ಮೇಲೆ ಪರಿಣಾಮವನ್ನುಂಟು ಮಾಡುತ್ತವೆ. ಗಂಡನ ಒರಟುತನದಿಂದ ಬೇಸತ್ತ ಆಶಾ ಮಗಳ ಜೊತೆ ಬೇರೆ ಮನೆ ಮಾಡಿ ಇರುತ್ತಾಳೆ. ಆನಂದ ಮಾತ್ರ ಹೆಂಡತಿಯನ್ನು ಮರೆತು ಅವಳು ಮನೆಬಿಟ್ಟು ಹೋದ ಕೂಡಲೇ ಬೇರೊಬ್ಬ ಹೆಣ್ಣನ್ನು ತಂದಿಡುತ್ತಾನೆ. ಪುರುಷನಿಗೆ ಹೆಂಡತಿಯಾದವಳು ಬೇಡವೆನಿಸಿದಾಗ ಅವಳನ್ನು ಬಿಟ್ಟು ಬೇರೊಬ್ಬಳನ್ನು ತಂದು ತನ್ನ ಬದುಕನ್ನು ಸುಖಮಯವಾಗಿಸಿಕೊಳ್ಳುವಲ್ಲಿ ಸಮಾಜ ಆತನಿಗೆ ಬಿಗಿ ಬಂಧನಗಳನ್ನು ಸಡಿಲಿಸಿರುವುದೇ ಕಾರಣವಾಗಿದೆ. ಇಂಥ ಕೌಟುಂಬಿಕ ಪರಿಸರದಲ್ಲಿ ತನ್ನ ತಂದೆ–ತಾಯಿಗಳ ಸಂಬಂಧದಿಂದ ರಚನಾ ತುಂಬಾ ನಲುಗಿ ಹೋಗುತ್ತಾಳೆ. ರಚನಾಳಿಗೆ ಮಾತ್ರ ತನ್ನ ತಂದೆ–ತಾಯಿಗಳ ಮಧ್ಯದಲ್ಲಿ ಏಕೆ ಬಿರುಕು ಸಂಭವಿಸಿದೆ ಎಂಬುದು ತಿಳಿದಿರುವುದಿಲ್ಲ. ರಚನಾ ತನ್ನ ತಂದೆ–ತಾಯಿಯರಲ್ಲಿ ಪ್ರೀತಿಯನ್ನು ಅರಸುತ್ತಾಳೆ. ಪ್ರತಿದಿನವೂ ತನ್ನ ಮನೆ ತೋಟದ ನಾಯಿಮರಿಗಳು ತಾನು ಸಾಕಿದ ನಾಯಿ ಪಪ್ಪಿಯ ಜೊತೆ ಆಡುವುದನ್ನು, ಶಾಲೆಗೆ ಪ್ರತಿದಿನ ಪಾಲಕರು ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗುವುದನ್ನು ನೋಡಿದಾಗ, ತನ್ನ ತಂದೆ–ತಾಯಿ ಕೂಡ ಎಲ್ಲರಂತೆ ಏಕೆ ಇಲ್ಲ ಎಂದು ನೊಂದುಕೊಳ್ಳುತ್ತಾಳೆ. ತಂದೆಯ ನೆನಪು ಬಂದಾಗಲೆಲ್ಲ ತಾಯಿಗೆ ತಿಳಿಯದಂತೆ ಅಳುತ್ತಾಳೆ. ಒಂದು ದಿನ ಆನಂದ ಶಾಲೆಗೆ ಬಂದು ಮಗಳಿಗೆ ತಿನಿಸು ಆಟಿಕೆಗಳನ್ನು ಕೊಟ್ಟು ಮತ್ತೆ ಮರುದಿನ ಬರುವುದಾಗಿ ರಚನಾಳಿಗೆ ಹೇಳಿ ಹೋಗುತ್ತಾನೆ. ಆದರೆ ಆನಂದ ಮಾತ್ರ ಆ ದಿನ ಬರದೇ ಇದ್ದುದಕ್ಕಾಗಿ ಹಠ ಹಿಡಿದ ರಚನಾ ತನ್ನ ಅಪ್ಪನ ಮನೆಗೆ ಬರುತ್ತಾಳೆ. ಮನೆ ಒಳಗೆ ತನ್ನ ತಾಯಿಯ ಸ್ಥಾನದಲ್ಲಿ ಬೇರೊಬ್ಬಳು ಮಲಗಿರುವುದನ್ನು ಕಂಡು ಕುಪಿತಳಾಗುತ್ತಾಳೆ. "ನನಗೆ ಯಾವ ಆಂಟೀ ಕಂಟೀ ಇಲ್ಲಾ...... ಅವರು ಇಲ್ಯಾಕ ಮಲಗ್ಯಾರ?"[7] ಎಂದು ತಂದೆಯ ಹೇಯ ಕೃತ್ಯವನ್ನು ವಿರೋಧಿಸುತ್ತಾಳೆ. ಬೆಳಗಾದಾಗ ತನ್ನ ಪಕ್ಕದಲ್ಲಿ ತನ್ನ ಅಪ್ಪ ಮಲಗಿಲ್ಲದಿರುವುದನ್ನು ಅರಿತು ಹೊರಗೆ ಸುರಿಯುತ್ತಿರುವ ಮಳೆಯಲ್ಲಿ ತಂದೆಗೆ ಬಯ್ಯುತ್ತಾ ನಿಲ್ಲುತ್ತಾಳೆ. ಜ್ವರದಿಂದ ಬಳಲುತ್ತಿರುವ ರಚನಾಳಿಗೆ ಒಳಗೆ ಕರೆದುಕೊಂಡು ಹೋಗಲು ಅವಳ ತಂದೆ ಎಷ್ಟೇ ಪ್ರಯತ್ನಿಸಿದರೂ, ಆಗದೇ ಅವಳ ಇಚ್ಚೆಯಂತೆ ಅವಳ ಮನೆಗೆ ಕರೆದೊಯ್ಯುತ್ತಾನೆ. ರಚನಾ ಮೂರ್ಛಾವಸ್ಥೆಯಲ್ಲಿದ್ದು, ಅವಳಿಗೆ ಡಬಲ್ ನ್ಯೂಮೋನಿಯಾದಿಂದ ಜ್ವರ ನೆತ್ತಿಗೇರಿದ್ದ ಅವಳ ಪ್ರಾಣ ಪಕ್ಷಿ ಹಾರಿಹೋಗುತ್ತದೆ. ವೈವಾಹಿಕ ಪರಿಸರವನ್ನು ಅದರಿಂದ ನೋವಿಗೊಳಗಾದ ಮಗುವಿನ ದೃಷ್ಟಿಯಿಂದ ನೋಡಿರುವುದು ಈ ಕತೆಯ ವೈಶಿಷ್ಟ್ಯ. ಕತೆಯಲ್ಲಿ ಬದಲಾಗುತ್ತಿರುವ ದೃಷ್ಟಿಕೋನ ದಿಗಿಲಿನ ವಾತಾವರಣವನ್ನು ಸಮರ್ಥವಾಗಿ ಸಂಕೇತಿಸುತ್ತದೆ.

೭ ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೧೪೦.

ಆಧುನಿಕ ಭಾರತದ ಬದಲಾದ ವ್ಯವಸ್ಥೆಯಲ್ಲಿ ಶಿಕ್ಷಣವನ್ನು ಪಡೆದ ಮಹಿಳೆ ಪುರುಷನೊಂದಿಗೆ ವಿವಿಧ ರಂಗಗಳಲ್ಲಿ ದುಡಿಯುತ್ತಿದ್ದಾಳೆ. ಆರ್ಥಿಕವಾಗಿ ಸಮಾನತೆ, ಸ್ವಾತಂತ್ರ್ಯ, ಪಡೆದು ಸ್ವಾವಲಂಬಿಯಾದ ಮಹಿಳೆ ಇಂದು ಅನುಭವಿಸುತ್ತಿರುವ ಸಮಸ್ಯೆಗಳು ವರ್ಣಿಸಲಾರದಷ್ಟು, ಹೊರಗೆ ದುಡಿಯುತ್ತಿರುವ ಮಹಿಳೆಗೆ ಕುಟುಂಬದ ಜವಾಬ್ದಾರಿ ತಪ್ಪಿದಲ್ಲ. ನಮ್ಮ ವ್ಯವಸ್ಥೆ ಮಹಿಳೆಯನ್ನು ಕುಟುಂಬಕ್ಕೆ ಅಷ್ಟರ ಮಟ್ಟಿಗೆ ಬಂಧಿಸಿಬಿಟ್ಟಿದೆ. ಹೆಂಡತಿಯಾಗಿ, ತಾಯಿಯಾಗಿ ನಿರ್ವಹಿಸುವ ಪಾತ್ರದೊಂದಿಗೆ ಉದ್ಯೋಗಸ್ಥೆಯ ಪಾತ್ರವನ್ನು ನಿರ್ವಹಿಸುವಾಗ ಕೆಲವೊಮ್ಮೆ ಕುಟುಂಬದ ಸದಸ್ಯರ ಕಣ್ಣಲ್ಲಿ ಅಪರಾದಿಯಾಗುವ ಪ್ರಸಂಗಗಳೂ ಉಂಟು. ಅಷ್ಟೇ ಅಲ್ಲ ಕುಟುಂಬದಲ್ಲಿ ಗಂಡ–ಹೆಂಡತಿ ಇಬ್ಬರೂ ಉದ್ಯೋಗಸ್ಥರಾಗಿದ್ದಾಗ ಉದ್ಯೋಗ ಮಾತ್ಸರ್ಯದಿಂದಲೂ ಹಲವಾರು ಸಮಸ್ಯೆಗಳು ಉದ್ಭವಿಸುತ್ತವೆ. ಇವೆಲ್ಲ ಕಾರಣಗಳಿಂದ ದಾಂಪತ್ಯ ಜೀವನದಲ್ಲಿ ಬಿರುಕು ಉಂಟಾಗುವುದನ್ನು ನೋಡಬಹುದು.

'ಗಿಳಿಯು ಪಂಜರದೊಳಿಲ್ಲಾ' ಕತೆಯ ಕಥಾ ನಾಯಕಿ ಡಾ. ವಿನಯಾ ತಾನು ಪ್ರೀತಿಸಿದ ಡಾ. ದಿನೇಶ ಭಟ್ಟನ ಸಣ್ಣತನ ಅರಿತಾಗ ಅವರಿಬ್ಬರ ಮದುವೆಯ ನಿರ್ಧಾರ ಮುರಿದುಬೀಳುತ್ತದೆ. ಇನ್ನೊಬ್ಬ ಖ್ಯಾತ ವೈದ್ಯ ಡಾ. ಮದನ ಜೋಷಿ ಎಂಬ ವಿಧುರನನ್ನು ಕೆಲವು ಷರತ್ತುಗಳೊಂದಿಗೆ ಒಪ್ಪಿಗೆ ಪಡೆದು ಡಾ. ವಿನಯಾ ಮದುವೆಯಾಗುತ್ತಾಳೆ. ಸಂಸಾರ ಹಲವು ಕಾಲ ಸುಖಮಯವಾಗಿ ಸಾಗಿರುತ್ತದೆ. ಡಾ. ವಿನಯಾಳ ಕೀರ್ತಿ ದಿನದಿಂದ ದಿನಕ್ಕೆ ಎಲ್ಲೆಡೆ ಹರಡುತ್ತದೆ. ಆದರೆ ಮದನಜೋಶಿಯ ಸಂಪಾದನೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತ ಸಾಗುತ್ತದೆ. ಕಡಿಮೆಯಾಗುತ್ತ ಸಾಗುತ್ತದೆ. ವೃತ್ತಿ ಮಾತ್ಸರ್ಯದಿಂದ ಅವಳ ಬಗ್ಗೆ ಆತನಲ್ಲಿ ಕೀಳರಮೆಯುಂಟಾದಾಗ ದಾಂಪತ್ಯದಲ್ಲಿ ಬಿರುಕುಂಟಾಗುತ್ತದೆ. ಡಾ. ಮದನ ಜೋಶಿ, "ಈ ರೀತಿ ಸಿಕ್ಕ ಸಿಕ್ಕ ಟಾಮಿಗೆ ಬರುದಾದ್ರ ನಮಗ ಯಾವ ಹಾಸ್ಪಿಟಲ್ ಬೇಕಿಲ್ಲಾ...... ನಾಳಿಂದ ಅದನ್ನು ಕ್ಲೋಜ್ ಮಾಡಿಬಿಡು"[೮] ಎಂಬ ಮಾತಿಗೆ ಡಾ. ವಿನಯಾ ವಿರೋಧಿಸುತ್ತಾಳೆ. "ನೀ ಎಲ್ಲಿರತಿ ಮನ್ಯಾಗ ಕೇಳ್ಳಿಕ್ಕೆ? ನಿನ್ನ ಕೆಲಸಾ, ನಿನ್ನ ಪ್ರಶಸ್ತಿ, ನಿನ್ನ ಪ್ರಸಿದ್ಧಿ, ನಿನ್ನ ಮೀಟಿಂಗು, ನಿನಗ ಗಂಡನ ಸಲುವಾಗಿ ಟೈಮ್ ಇಲ್ಲಾ...."[೯] ಎಂಬ ದಿನೇಶನ ಮಾತಿನಲ್ಲಿ ಗಂಡನಾದವನು ಹೆಂಡತಿಯ ಪ್ರಗತಿಯನ್ನು ಸಹಿಸುವುದಿಲ್ಲಾ ಎಂಬುದು ತಿಳಿದುಬರುತ್ತದೆ. ಕೊನೆಗೆ ಮದನ ಜೋಶಿ ಇನ್ನೊಬ್ಬ ಹೆಂಡತಿಯನ್ನು ಮನೆಗೆ ತರುವುದಾಗಿ ಹೇಳುತ್ತಾನೆ "ಆಗ ಡಾ. ವಿನಯಾ ಓ, ಇದೂ ಒಂದು ಅಂಜಿಕೆ ಅಂತ ತಿಳದಿರೇನು? ನಿಮ್ಮ ಹತ್ರ ಇರೋ ಕಡೆ ಬ್ರಹ್ಮಾಸ್ತ್ರಾ..... ಗಂಡಾ ಗಂಡಸೂ ಅನ್ನುವ ಇನ್ನೇನು ಮಾಡಲಿಕ್ಕೆ ಸಾಧ್ಯ ಅದ? ಹೆಂಗಸರನ್ನು ತಂದ್ರೇನು ಸುಖದ ಸಂಸಾರ ಆಗತದ ಅಂತ

[೮] ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೮೯.
[೯] ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೮೯.

ತಿಳದೀರೇನು...?"[10] ಎಂಬ ವಿನಯಾಳ ಮಾತಿಗೆ ಪ್ರತಿಕ್ರಿಯೆಯಾಗಿ "ಅದೇನು ನಾ ನಿನ್ನ ಹತ್ರ ಉಪದೇಶಾ ಕೇಳತಾ ಇಲ್ಲಾ. ನನಗೆ ಬೇಕು"[11] ಎಂಬ ಮಾತಿನಲ್ಲಿ ಡಾ. ಮದನನ ಪುರುಷಾಧಿಕಾರ ಎದ್ದು ಕಾಣುತ್ತದೆ.

"ನನ್ನ ಮದುವಿ ಆಗುವಾಗ ಯಾಕ ಈ ವಿಚಾರ ಮಾಡಲಿಲ್ಲ? ನನ್ಯಾಕ ಮದುವಿ ಆದ್ರಿ... ಆಗಬೇಕಿದ್ರ ಒಬ್ಬ ಸಾದಾ ಹೆಣ್ಣು ಮಗಳನ್ನು ಮದುವಿ ಆಗಬಹುದಿತ್ತಲ್ಲಾ? ಇಪ್ಪತ್ನಾಲ್ಕು ತಾಸು ನಿಮ್ಮ ನೆರಳಿನ್ಯಾಂಗ ನಿಮ್ಮ ದಾಸಿ ಹಾಂಗ ನಿಮ್ಮ ಹುಂದಾಗ ಹೂಂ ಕೂಡಿಸೊ ಪಂಜರದ ಗಿಳೀನ್ನ ಸಾಕಬೇಕಿತ್ತು. ಅಂದ್ರ ನಿಮ್ಮ ಪಾರ್ಟಿ ಡಿನ್ನರದೊಳಗೆ ಉಟ್ಟು-ತೊಟ್ಟು ನಿಮ್ಮ ಕೀರ್ತಿ ಹೆಚ್ಚು ಮಾಡುತ್ತಿದ್ದಳು..... See I am not interested in your way of life any more... ನಿಮ್ಮ ಒಳಗಿನ ಪುರುಷಾ ಹೊರಗೆದ್ದ ಬರಲಿಕ್ಕ ಹತ್ಯಾನ... ನಿಮ್ಮ ಗೊಂಬೆ ನಾ ಆಗಲಿಕ್ಕ ಸಾಧ್ಯ ಇಲ್ಲಾ.... ನನ್ನ ವಿದ್ಯಾ ಅದ. ಉದ್ಯೋಗ ಅದ. ಸ್ವತಂತ್ರ ವ್ಯಕ್ತಿತ್ವ ಅದ. ನಾ ಸ್ವತಂತ್ರ ಇರಬಲ್ಲೆ"[12]. ಎಂಬ ಮಾತಿನಲ್ಲಿ ಗಂಡನ ದರ್ಪದ ವಿರುದ್ಧ ಡಾ. ವಿನಯಾಳ ಪ್ರತಿಭಟನೆಯಿದೆ.

ಡಾ. ವಿನಯಾ ಗಂಡನಲ್ಲಾದ ಪರಿವರ್ತನೆಯಿಂದ ಬೇಸತ್ತು ತನ್ನ ಮಗುವಿನೊಂದಿಗೆ ಮನೆಬಿಟ್ಟು ಬಂದು ತಂದೆಯ ಮನೆಯಲ್ಲಿ ಉಳಿದುಕೊಳ್ಳುತ್ತಾಳೆ. ಹೀಗೆ ಒಂದು ಆದರ್ಶ ಸಾಧನೆಯ ಸಿದ್ಧಿಯಲ್ಲಿ ನಿರತಳಾದ ಡಾ. ವಿನಯಾಳಿಗೆ ಸಂಸಾರ ಸುಖ, ಕೌಟುಂಬಿಕ ನೆಮ್ಮದಿ ದೊರೆಯದೆ ಹೋಗುತ್ತದೆ. ಕೊನೆಗೂ ಡಾ. ಮದನ ಜೋಷಿಗೆ ತನ್ನ ತಪ್ಪಿನ ಅರಿವಾಗಿ ಹೆಂಡತಿಯಿದ್ದಲ್ಲಿ ಬಂದಾಗ ಡಾ. ವಿನಯಾ ಮೊದಲು ಅವನ ಮಾತನ್ನು ಒಪ್ಪದಿದ್ದರೂ ಗಂಡನ ಮೇಲಿನ ಅತಿಶಯವಾದ ಪ್ರೀತಿಯಿಂದ ಮತ್ತೇ ಆತನ ಜೊತೆಗೆ ಒಂದಾಗಿ ಬಾಳುವ ನಿರ್ಧಾರ ಕೈಗೊಳ್ಳುತ್ತಾಳೆ. ಹೀಗೆ ದಾಂಪತ್ಯದಲ್ಲಿ ಕೆಲವು ಕಾರಣಗಳಿಂದ ಬಿರುಕುಂಟಾಗಿದ್ದರೂ ಪರಸ್ಪರ ತಿಳುವಳಿಕೆಯಿಂದಾಗಿ ಮತ್ತೆ ಒಂದಾಗುತ್ತಾರೆ. ಸುಖ ದಾಂಪತ್ಯದಲ್ಲಿ ಬಿರುಕು ಕಾಣಿಸಿಕೊಂಡಾಗ ಪುರುಷನ ಪಾಶ್ಚಾತ್ತಾಪವೊ, ಒಲವೋ ಒಟ್ಟು ಮಾನವೀಯ ಗುಣದಿಂದಾಗಿ ಬದುಕು ಸುಂದರವಾಗಿ ಸುಖಮಯವಾಗಿ ಸಾಗುವುದು. ಇದು ಲೇಖಕಿಯ ಆಶಯವಾಗಿದೆ.

ಆಯ್ಕೆಯ ಸ್ವಾತಂತ್ರ್ಯದಿಂದ ವಂಚಿತಗೊಳ್ಳುವ ಹೆಣ್ಣು ಮಕ್ಕಳು ಪುರುಷ ನಿರ್ಣಯಿತ ಆಯ್ಕೆಗೆ ಒಳಗಾಗಿ ಜೀವನದಲ್ಲಿ ಸೋಲನ್ನು ಎದುರಿಸುವ ಸ್ಥಿತಿಯುಂಟಾಗುತ್ತದೆ. ಸಾಂಪ್ರದಾಯಿಕ ಕುಟುಂಬದಲ್ಲಿ ಬೆಳೆದ ಹೆಣ್ಣು ಮಕ್ಕಳಿಗೆ ತಮ್ಮ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವ ಅವಕಾಶ ನೀಡಿಲ್ಲ. ಕುಟುಂಬದ ಹಿರಿಯರು ತೋರಿಸಿದ ಗಂಡನ್ನೇ ಮದುವೆಯಾಗಬೇಕಾದ ಅನಿವಾರ್ಯತೆ ಇರುತ್ತದೆ. ಗಂಡು ಎಂಥವನೇ ಆಗಿರಲಿ, ಆತನನ್ನು ವಿಚಾರಿಸದೇ ಒಪ್ಪಿಕೊಳ್ಳಬೇಕೆಂಬ ನಿರ್ಧಾರವನ್ನು ಕುಟುಂಬದ ಹಿರಿಯರು ಮಾಡುತ್ತಾರೆ. "ಕಣ್ಣಂಚಿನಲ್ಲೊಂದು ತಾರೆ"ಯ ಕಥಾ ನಾಯಕಿ ಸುಮಾಳನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಇಂದಿನ

[10] ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೨೦.

[೧೧] ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೨೦.

[೧೨] ಪ್ರೊ. ಮಾಲತಿ ಪಟ್ಟಣಶೆಟ್ಟಿ, ಸೂರ್ಯ ಮುಳುಗುವುದಿಲ್ಲ. ಕಥಾ ಸಂಕಲನ (೧೯೯೯), ಪು. ೨೦.

ರಾಜಕಾರಣ ಮನುಷ್ಯನನ್ನು ಇಷ್ಟೊಂದು ಸ್ವಾರ್ಥಿಯನ್ನಾಗಿಮಾಡಿದೆ ಎಂದರೆ, ತಂದೆಯಾದವನು ತನ್ನ ಸ್ವಾರ್ಥ ಸಾಧನೆಗಾಗಿ ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ಕೂಡ ಬಲಿ ಕೊಡಲು ಸಿದ್ಧನಿರುತ್ತಾನೆ ಎಂಬ ಧ್ವನಿ ಈ ಕಥೆಯಲ್ಲಿದೆ. ಕಥಾನಾಯಕಿ ಸುಮಾ ಒಬ್ಬ ವಿದ್ಯಾವಂತ ಯುವತಿಯಾಗಿದ್ದು ತನ್ನ ಸಹಪಾಠಿಯಾದ ಶಂಕರನೊಂದಿಗೆ ವಿವಾಹವಾಗುವ ನಿರ್ಧಾರ ಕೈಗೊಂಡಿರುತ್ತಾಳೆ. ಇದನ್ನು ತಿಳಿದ ಇವಳ ತಂದೆ ಒಬ್ಬ ಸ್ತ್ರೀ ಲಂಪಟ ಕುಡುಕ ರಾಜಕಾರಣಿಯೊಂದಿಗೆ ಮದುವೆ ಮಾಡಿರುತ್ತಾನೆ. ಇಲ್ಲಿ ಹೆಣ್ಣು ಮಕ್ಕಳು ತಮ್ಮ ಬದುಕಿನ ಆಯ್ಕೆಯ ಸ್ವಾತಂತ್ರ್ಯದ ಹಕ್ಕಿನಿಂದ ವಂಚಿತವಾಗುವುದು ಕೂಡಾ ಪಿತೃ ಪ್ರಧಾನತೆಯ ಫಲಶೃತಿಯಾಗಿದೆ. ಸುಮಾ ಬ್ರಷ್ಟ, ಕುಟುಕ, ಕೊಲೆಗಡುಕ, ಸ್ತ್ರೀಲಂಪಟ ಗಂಡನಿಂದ ಯಾವುದೇ ರೀತಿಯ ಪ್ರೇಮವನ್ನು, ರಕ್ಷಣೆಯನ್ನು ಪಡೆಯುವುದಿಲ್ಲ. ವೈವಾಹಿಕ ಚೌಕಟ್ಟಿನೊಳಗೆ ಸುಮಾ ತನ್ನ ಗಂಡನಿಂದ ಶೋಷಣೆಗೆ ಒಳಗಾಗುತ್ತಾಳೆ. ಇದರಿಂದ ಬೇಸತ್ತ ಸುಮಾ ತನ್ನ ಬಗ್ಗೆ ಯಾವುದೇ ರೀತಿ ಮಾನವೀಯ ಕಾಳಜಿ ತೋರದ ಗಂಡನನ್ನು ಬಿಟ್ಟು ತನ್ನ ತವರಿಗೆ ಬಂದಾಗಲೂ, ಅಲ್ಲಿಯೂ ಅವಳಿಗೆ ಸರಿಯಾದ ಸ್ಥಾನ ದೊರಕದೇ ಹೋಗುತ್ತದೆ. ಆಗ ತಾನು ಮೊದಲು ಪ್ರೀತಿಸಿದ ಶಂಕರನ ಆಶ್ರಯವನ್ನು ಪಡೆಯುತ್ತಾಳೆ. ಆದರೆ ರಾಜಕೀಯ ದರ್ಪದಿಂದ ಮೆರೆಯುತ್ತಿರುವ ತನ್ನ ಗಂಡ ಹಾಗೂ ತಂದೆ ಇವರಿಂದ ಶಂಕರನಿಗೆ ಯಾವುದೇ ರೀತಿಯ ತೊಂದರೆಯುಂಟಾಗಬಾರದೆಂದು ಭಾವಿಸಿ, ಬೆಂಗಳೂರಿನಲ್ಲಿ ಏಕಾಂಗಿಯಾಗಿ ಸ್ವಾತಂತ್ರವಾಗಿ ಬಾಳುವ ನಿರ್ಧಾರ ಕೈಗೊಳ್ಳುತ್ತಾಳೆ. ಇಲ್ಲಿ ಸುಮಾ ಗಂಡನ ದೌರ್ಜನ್ಯವನ್ನು ತಾನು ಮನೆಬಿಟ್ಟು ಹೊರರ ಬರುವ ಮೂಲಕ ಪ್ರತಿಭಟಿಸುತ್ತಾಳೆ. ಕೌಟುಂಬಿಕ ನೆಲೆಯಲ್ಲಿ ಎದುರಿಸುವ ಒತ್ತಡ, ವಿವಾಹ ಬಂಧನ ಇದನ್ನು ಎದುರಿಸುವಲ್ಲಿ ಅವಳು ತೋರಿಸಿ ಧೈರ್ಯ, ಅದನ್ನು ಮೀರುವಲ್ಲಿ ತೋರಿಸುವ ಗಟ್ಟಿತನವನ್ನು ಅವಳ ಧ್ವನಿಯನ್ನು ಉಳಿಸುತ್ತವೆ.

ಮೇಲಿನ ಕಥೆಗಳಲ್ಲಿ ವಿಷಮ ದಾಂಪತ್ಯದ ಛಾಯೆಯನ್ನು ಕಾಣಬಹುದಾಗಿದೆ “ಹೆಣ್ಣಿನ ಕನಸು–ಕಲ್ಪನೆಗಳನ್ನು ನಿರ್ದಯವಾಗಿ ತುಳಿಯುವ ಪುರುಷ ಪ್ರಧಾನ ವ್ಯವಸ್ಥೆಯ ಶೋಷಣೆಯ ವಿಭಿನ್ನ ರೂಪಗಳನ್ನು ಚಿತ್ರಿಸುವ ಕಥೆಗಳಲ್ಲಿ ಶೋಷಣೆಯ ಕೇಂದ್ರ ಪುರುಷಾತ್ಮಕವಾಗಿರುವುದು ನಿರೀಕ್ಷಿತವಾಗಿದ್ದರೂ, ಗಂಡಸು ಶೋಷಕ ಪಾತಳಿಯಲ್ಲಿ ಮಾತ್ರ ಸಿಕ್ಕಿಕೊಳ್ಳದೇ ಹೆಣ್ಣಿನ ಬದುಕನ್ನು ಅರಳಿಸುವ ಆತ್ಮ ಸಂಗಾತಿಯಾಗಿಯೂ ಮಹತ್ವ ಪಡೆದಿರುವುದು ವಿಶೇಷವಾಗಿದೆ”[13] ಎಂಬುದನ್ನು ಮಾಲತಿಯವರ ಕತೆಗಳಲ್ಲಿ ನೋಡಬಹುದು.

## ಗ್ರಂಥ ಋಣ

[೧೩] ಡಾ. ಶಾಂತಾ ಇಮ್ರಾಪೂರ, ಸಾಹಿತ್ಯ ಸಂವೇದನೆ (೨೦೦೭), ಪು. ೯೯೦.

## ಪ್ರೊ. ಮಾಲತಿ ಪಟ್ಟಣಶೆಟ್ಟಿಯವರ ಕಥೆಗಳಲ್ಲಿ ವಿಷಮ ದಾಂಪತ್ಯ


1) ಪ್ರೊ. ಮಾಲತಿ ಪಟ್ಟಣಶೆಟಿ, 'ಸೂರ್ಯ ಮುಳುಗುವುದಿಲ್ಲ' 1999.

2) ಡಾ. ಶಾಂತಾ ಇಮ್ರಾಪೂರ, 'ಸಾಹಿತ್ಯ ಸಂವೇದನೆ' ಚಿತ್ತಾರ ಪ್ರಕಾಶನ, ಧಾರವಾಡ–2007

3) ನೇಮಿಚಂದ್ರ, 'ಮಹಿಳಾ ಅಧ್ಯಯನ' ಅಂಕಿತ ಪುಸ್ತಕ, ಬೆಂಗಳೂರು– 2001

4) ಗಾಯಿತ್ರಿ. ಎನ್. 'ಮಹಿಳೆ ಬಿಡುಗಡೆಯ ಹಾದಿಯಲ್ಲಿ', ನವ ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು, 1996.

5) ದುರ್ಗಿ ಶಕುಂತಲಾ 'ಮಹಿಳಾ ಸಾಹಿತ್ಯ ಮತ್ತು ಸಮಸ್ಯೆಗಳು', ಉಜ್ವಲ ಪ್ರಕಾಶನ, ವೆಂಕಟೇಶ ನಗರ, ಗುಲ್ಬರ್ಗಾ.